# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## Crl.Misc 94/2020

ಆರ.ಡಬ್ಲ್ಯೂ- 1

| | | |
|---|---|---|
| ಹೆಸರು | ಃ- | ವಿನೋದರಡ್ಡಿ ಕುಚನೂರು |
| ತಂದೆಯ ಹೆಸರು | ಃ- | ಗೋವಿಂದಪ್ಪ |
| ವಯಾ | ಃ- | 37 ವರ್ಷ |
| ಉದ್ಯೋಗ | ಃ- | ಖಾಸಗಿ ಕೆಲಸ |
| ವಾಸಸ್ಥಳ | ಃ- | ವಿಜಯಪುರ, ಹೊಸುರು |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 21-08-2025. |

*ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ ಃ*

1) ಅರ್ಜಿದಾರಳು ನನ್ನ ಹೆಂಡತಿ. ನಮ್ಮ ವಿವಾಹವು 14-05-2017 ರಲ್ಲಿ ಹಿಂದೂ ಸಂಪ್ರದಾಯದ ಅನುಸಾರ ಹೊಸುರುದಲ್ಲಿ ಆಗಿರುತ್ತದೆ. ವಿವಾಹದ ನಂತರ ಅರ್ಜಿದಾರಳು ನನ್ನ ಸಂಗಡ ಜೀವನ ಸಾಗಿಸಲು ಕೇವಲ 2 ತಿಂಗಳು ಬಂದು ನಂತರದಲ್ಲಿ ಅನಾರೋಗ್ಯವಿರುತ್ತದೆ ಎಂದು ಹೇಳಿ ಹೋಗಿರುತ್ತಾಳೆ. ಆನಂತರ ನಾನು ನಮ್ಮ ಹಿರಿಯರ ಮೂಖಾಂತರ ಅವಳನ್ನು ಕರೆಯಲು ಹೋಗಿರುತ್ತೇನೆ. ಅರ್ಜಿದಾರಳು ನನಗೆ ಪ್ರತ್ಯಕ ಮನೆ ಮಾಡಿದರೆ ಮಾತ್ರ ಬರುತ್ತೇನೆಂದು ಹೇಳಿ ಕಳುಹಿಸಿರುತ್ತಾಳೆ.

2) ಆನಂತರ ಆಕೆಯು ನನ್ನ ತಂದೆ-ತಾಯಿ ಸಂಗಡ ಜೀವನ ಸಾಗಿಸುವುದಿಲ್ಲವೆಂದು ನುಡಿದ ಕಾರಣ ನಾನು ಬೇರೆ ಮನೆ ಮಾಡಿರುತ್ತೇನೆ. ಅಲ್ಲಿ ಅವಳು ಕೇವಲ 8 ದಿನಗಳ ಕಾಲ ವಾಸ ಮಾಡಿರುತ್ತಾಳೆ. ನಂತರ ಅಲ್ಲಿಂದ ಅವಳ ಅಜ್ಜಿಗೆ ಅನಾರೋಗ್ಯವಿರುತ್ತದೆ ಎಂದು ಹೇಳಿ ಜಾವೂರುಗೆ ಹೋಗಿರುತ್ತಾಳೆ.

3) ನಂತರ ನಾನು ನನ್ನ ವಕೀಲರ ಮೂಲಕ ದಿನಾಂಕ 17-03-2020 ರಂದು ನೋಟಿಸನ್ನು ನೀಡಿರುತ್ತೇನೆ. ಅದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ. ನೋಟಿಸ ನೀಡಿದ ನಂತರ ಅರ್ಜಿದಾರಳು ನನ್ನ ಸಂಗಡ ಜೀವನ ಸಾಗಿಸಲು ಬಂದಿರುವುದಿಲ್ಲ. ನಂತರದಲ್ಲಿ ನಾನು ಮಾನ್ಯ ಕೌಟಂಬಿಕ ನ್ಯಾಯಾಲಯ ವಿಜಯಪುರದಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ಅದರಲ್ಲಿ ಹಾಜರು ಆಗಿರುತ್ತಾರೆ. ಸದರಿ ಪ್ರಕರಣದಲ್ಲಿ ನಾವು ವಿವಾಹ ಜೀವನವನ್ನು ಸಾಗಿಸಬೇಕೆಂದು ಆದೇಶವಾಗಿದ್ದು ಅರ್ಜಿದಾರಳು ಪಾಲನೆ ಮಾಡಿರುವುದಿಲ್ಲ. ಸದರಿ ಪ್ರಕರಣ ಆದೇಶದ ನಂತರ ಅರ್ಜಿದಾರಳು ಪ್ರಸ್ತುತ ಸುಳ್ಳು ಪ್ರಕರಣವನ್ನು ಜೀವನಾಂಶ ಕೇಳಿ ಹಾಕಿರುತ್ತಾರೆ.

4) ಅರ್ಜಿದಾರಳ ತವರೂ ಮನೆಯವರು ಆರ್ಥಿಕವಾಗಿ ಒಳ್ಳೆಯ ಕುಟುಂಬದವರು ಇರುತ್ತಾರೆ. ನನ್ನ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇರುವುದಿಲ್ಲ. ನನಗೆ ಕಡಿಮೆ ಸಂಬಳ ಇರುತ್ತದೆ. ಅರ್ಜಿದಾರಳಿಗೆ ಜೀವನಾಂಶ ಪಡೆಯುವ ಕಾನೂನು ಅರ್ಹತೆ ಇರುವುದಿಲ್ಲ. ಅರ್ಜಿದಾರಳು ನನ್ನ ಸಂಗಡ ಜೀವನ ಸಾಗಿಸಲು ಬಂದರೆ ನಾನು ಕರೆದುಕೊಂಡು ಹೋಗುತ್ತೇನೆ.

5) ಅರ್ಜಿದಾರಳ ಅರ್ಜಿಯನ್ನು ಓದಿಕೊಂಡಿರುತ್ತೇನೆ. ವಿವಾಹದ ಸಮಯದಲ್ಲಿ ಅರ್ಜಿದಾರಳು ಬೆಲೆ ಬಾಳುವ ವಸ್ತುಗಳನ್ನು ಹಾಗೂ ಹಣ ನೀಡಿದ ಬಗ್ಗೆ ಸುಳ್ಳು ನುಡಿದಿರುತ್ತಾಳೆ. ನಾನು ಅರ್ಜಿದಾರಳಿಗೆ ಹಣ ಹಾಗೂ ವರದಕ್ಷಣೆ ಕೇಳಿ ಕಿರುಕುಳ ನೀಡಿರುತ್ತೇನೆಂದು ಹಾಗೂ ನಾನು ನನ್ನ ತಂದೆ ತಾಯಿ ಅವಳಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿದ ಬಗ್ಗೆ ಸುಳ್ಳು ನುಡಿದಿರುತ್ತಾಳೆ. ಅರ್ಜಿದಾರಳಿಗೆ ನಾವು ಊಟ ಉಪಹಾರ ನೀಡದೆ ಆಕೆಯ ಬಂಗಾರವನ್ನು ಕಸೆದುಕೊಂಡು ಆಕೆಗೆ ಮನೆಯಿಂದ ಹೊರಹಾಕಿದ ಬಗ್ಗೆ ಅವಳು ಸುಳ್ಳು ನುಡಿದಿರುತ್ತಾಳೆ.

6) ನಾನು ಅರ್ಜಿದಾರಳಿಗೆ ಹಣದ ಬೇಡಿಕೆಯನ್ನು ನೀಡಿ ಕಿರುಕಳು ನೀಡಿರುತ್ತೇನೆಂದು ಸುಳ್ಳು ನುಡಿದಿರುತ್ತಾಳೆ. ನನ್ನ ಹೆಸರಿನಲ್ಲಿ ಹೊಲವಿದ್ದ ಬಗ್ಗೆ ಸುಳ್ಳು ನುಡಿದಿರುತ್ತಾಳೆ. ನನಗೆ ಆದಾಯವಿರುತ್ತದೆ ಆದರೆ 30-35 ಲಕ್ಷ ಆದಾಯ ಇರುವುದಿಲ್ಲ. ಆದಕಾರಣ ಅರ್ಜಿದಾರಳು ಸುಳ್ಳು ಸಂಗತಿಗಳನ್ನು ಕಾಣಿಸಿ ಸಲ್ಲಿಸಿದ ಅರ್ಜಿಯನ್ನು ಕಿತ್ತುಹಾಕಬೇಕೆಂದು ಕೋರಿಕೆ.

ಮುಂದುವರೆದ ಸಾಕ್ಷಿಯ ಹೇಳಿಕೆಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನವಲಗುಂದ.**